(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ''ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

4. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1998

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ಡಿಸ್ಟ್ರಿಕ್ಟ್ ರೀಆರ್ಗನೈಸೇಷನ್ ಆದಮೇಲೆ ದಾವಣಗೆರೆಗೆ ಸೇರಿದಂತಹ ಹರಪನಹಳ್ಳಿ, ಕೊಪ್ಪಳ ಜಿಲ್ಲೆ ಆದಕ್ಕೆ ಕೆಲವು ತಾಲ್ಲೂಕು ಸೇರಿಸಿ ಕಾನೂನು ಮಾಡಿದೆ. ಇದಕ್ಕೆ ನಮ್ಮೆಲ್ಲರ ಸಪೋರ್ಟ್ ಇದೆ. ಆ ಮಾತು ಬೇರೆ. ಆದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾವು ಹೋದ ಸಲ ಡೆಲಿಗೇಷನ್ ಹೋದಾಗ ಪ್ರಕಾಶ್‌ರವರು ಇದ್ದರು. ಎಲ್ಲಾ ಶಾಸಕರು ಕೂಡ ಭೇಟಿಯಾಗಿದ್ದೆವು. ಹೋದಸಲ 60 ಕೋಟಿ ರೂಪಾಯಿ ಬಜೆಟ್‌ನಲ್ಲಿ ಸೇರಿಸಿ ಕೇವಲ 45 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ಕಡಿಮೆಯಾಗುತ್ತಾ ಇದೆ. 1991-92ರಲ್ಲಿ ಮತ್ತು 1990-91ರಲ್ಲಿ ಸುಮಾರು 60ಕೋಟಿ 65ಕೋಟಿ ರೂಪಾಯಿ ಕೊಡುತ್ತಿದ್ದರು. ಇವತ್ತಿನ ಇನ್‌ಫ್ಲೇಷನ್‌ಗೆ 100 ಕೋಟಿ ರೂಪಾಯಿ

ಕೊಡಬೇಕಾಗಿದೆ. ಅದನ್ನು ಕೊಡಲಿಲ್ಲ. ಇರತಕ್ಕ ಅಲೋಕೇಷನ್‌ನಲ್ಲಿ ನೀವು ಕಡಿಮೆ ಮಾಡಿದ್ದೀರಿ. ಇದು ಸರಿಯಲ್ಲ ಎಂದು ಹೇಳಿದೆವು. ಮುಂದಿನ ವರ್ಷದ ಬಜೆಟ್‌ನಲ್ಲಿ ಸರಿಪಡಿಸುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ತಾವು ಕೂಡ ಇದ್ರಿ ಇದಕ್ಕೆ ಸಾಕ್ಷಿಯಾಗಿ. ನಮ್ಮ ದುರ್ದೈವ ಏನೆಂದರೆ ನೂರು ಕೋಟಿ ರೂಪಾಯಿಗೆ ನೀವು ಎನ್‌ಹ್ಯಾನ್ಸ್ ಮಾಡುವುದು ಹೋಯಿತು, 65 ಕೋಟಿ ರೂಪಾಯಿ ಒರಿಜನಲ್ ಏನಿತ್ತು ಅದೂ ಹೋಯಿತು. ಈಗ ಏನಾಗಿದೆ ಅಂದರೆ ಪ್ರತಿ ಶಾಸಕರು 50 ಲಕ್ಷ ರೂಪಾಯಿ ಕೆಲಸ ತೋರಿಸಬೇಕೆಂದು, ಅಷ್ಟು ಸಜೆಸ್ಟ್ ಮಾಡಬೇಕೆಂದು ಇದೆ. ಅದೂ ಹೋಗಿ 31 ಲಕ್ಷಕ್ಕೆ ಬಂದಿದೆ. ಡಿಸ್ಟ್ರಿಷನರಿ ಅಮೌಂಟ್ ತಮ್ಮಲ್ಲಿರತಕ್ಕದ್ದು ಖರ್ಚುಮಾಡುವುದಕ್ಕೆ ಅದೂ ಕೂಡ ಕಡಿಮೆಯಾಗಿದೆ. ಹೀಗಾಗಿ ಯಾವ ಒಂದು ಉದ್ದೇಶದಿಂದ ರೀಜನಲ್ ಇಂಬ್ಯಾಲೆನ್ಸನ್ನು ಹೋಗಲಾಡಿಸಲಿಕ್ಕೆ ಅದಕ್ಕೆ ಹೆಚ್ಚಿನ ಒತ್ತು ಕೊಟ್ಟು ಹೆಚ್ಚಿನ ಹಣ ಕೊಟ್ಟು ಹಿಂದುಳಿದ ಭಾಗಗಳಿಗೆ ಪ್ರೋತ್ಸಾಹ ನೀಡಬೇಕು, ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ಸರ್ಕಾರದ ಇಚ್ಛೆ ಏನಿತ್ತು ಅದಕ್ಕೆ ಇವತ್ತು ಹಣದ ಕೊರತೆಯಿಂದ ನಿರಾಸೆಯಾಗಿದೆ, ತೊಂದರೆಯಾಗಿದೆ. 25ಕೋಟಿ ರೂಪಾಯಿ ಕೊಟ್ಟು ಹೆಲಿಕಾಪ್ಟರ್ ತೆಗೆದುಕೊಂಡಿದ್ದೀರಿ ಬಹಳ ಸಂತೋಷ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕೆಲಸ, ಮಲೆನಾಡು ಅಭಿವೃದ್ಧಿ ಮಂಡಳಿ ಕೆಲಸ ಕನಿಷ್ಪ ಅದನ್ನಾದರೂ ರಿವ್ಯೂ ಮಾಡುವುದಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಿ ನೋಡಬೇಕಾಗುತ್ತದೆ. ಅದರಲ್ಲಿ ಒಂಭತ್ತು ಜನ ಕೂಡಬಹುದು. ಒಂಭತ್ತರಲ್ಲಿ ಮೂರು ಆಕ್ಯುಪೈಡ್ ಇರುತ್ತದೆ. ಅನಂತ್‌ನಾಗ್‌ರವರು ಬೇಕೇ ಬೇಕು ನಿಮಗೆ, ಶ್ರೀನಿವಾಸ್‌ರವರು ಬೇಕು. ಉಳಿದ ನಾಲ್ಕೈದು ಜನರು ಇರುತ್ತಾರೆ ಅವರನ್ನು ಕರೆದುಕೊಂಡು ಹೋಗಿ ನಾನು ಬೇಡವೆನ್ನುವುದಿಲ್ಲ. ಈ ಸಾರಿಯಾದರೂ ಹೆಚ್ಚಿನ ಪ್ರಯತ್ನದಿಂದ ಅಡಿಶನಲ್‌ಗ್ರಾಂಟ್ ಕೊಡಿ. ಮೊದಲು 65ಕೋಟಿ ರೂಪಾಯಿ ಫಿಕ್ಸ್ ಇತ್ತು. ಅದರ ಮೇಲೆ 20-25 ಕೋಟಿ ಆದರೂ ಈ ಸಾರಿ ಕೊಡಿ. ಮುಂದಿನ ವರ್ಷದ ಬಜೆಟ್‌ನಲ್ಲಿ ನೂರು ಕೋಟಿ ಮಾಡಿದರೆ ನಿಮ್ಮ ಇಂಪ್ಲೇಷನ್ ರೇಟಿಗೆ ಡೆವಲಪ್‌ಮೆಂಟ್‌ಗೆ ಸ್ವಲ್ಪವಾದರೂ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ನಾವೆಲ್ಲರೂ ಹೆಚ್‌ಕೆಡಿಬಿ ಮೀಟಿಂಗ್‌ನಲ್ಲಿ ಕೂಡುವುದು, ಕಚ್ಚಾಡುವುದು ಅಂದರೆ ಅದು ನನ್ನ ಕೆಲಸ, ಇದು ನನ್ನ ಕೆಲಸ ಎಂದು ಸೇರಿಸಿ ಅವೆಲ್ಲಾ ಸೇರಿದಾಗ ಅದಕ್ಕೆ ದುಡ್ಡು ಇರುವುದಿಲ್ಲ. ಸೆಕ್ರೆಟರಿಯವರಿಗೆ ಮತ್ತು ಛೇರ್‌ಮನ್‌ರಿಗೆ ಬೈದು ಆಮೇಲೆ ಎದ್ದು ಬರುವುದು. ಪ್ರಭಾವ ಬೀರಿ ನಾನು ನಿಮಗೊಂದು ಪತ್ರ ಬರೆದು ಅದಕ್ಕೆ ನೀವು ಏನೋ ಒಂದಿಷ್ಟು ಕೊಟ್ಟರೆ ವೆಂಕಟೇಶ್‌ರವರನ್ನು ಕಾಡಿಬೇಡಿ ಪತ್ರ ಬರೆದು ಅವರು ಒಂದಿಷ್ಟು ಕೊಟ್ಟರೆ ಹೀಗೆ ಐದಾರು ಕೋಟಿ ರೂಪಾಯಿ ಹೆಚ್ಚಿಗೆ ಬರಬಹುದೇ ಹೊರತಾಗಿ ಎಲ್ಲಾ ಶಾಸಕರಿಗೆ ಎಲ್ಲಾ ಕ್ಷೇತ್ರಗಳಿಗೆ ಅನುಕೂಲವಿರತಕ್ಕ ಬಜೆಟ್ ಇಲ್ಲ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಿ ಇದಕ್ಕೆ 75 ಕೋಟಿ ರೂಪಾಯಿಗಳನ್ನಾದರೂ ಈ ಸಾರಿ ಬಿಡುಗಡೆ ಮಾಡತಕ್ಕದ್ದು ಆಗಬೇಕು. ಇಲ್ಲದಿದ್ದರೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಬೇರೆ ಬೇರೆ

ಹೇಳಿದ್ದೀರಿ. ಈ ಸಲ 75 ಕೋಟಿ ರೂಪಾಯಿಗೆ ಏರಿಸಬೇಕು. ಈಗ 55-60 ಕೋಟಿ ಇದೆ 15 ಕೋಟಿ ಕೊಟ್ಟರೆ ಅದೇನೂ ಜಾಸ್ತಿಯಾಗುವುದಿಲ್ಲ. ಆದರೆ ಹೋದಸಲ ಶಾಸಕರಿಗೆ 50 ಲಕ್ಷ ರೂಪಾಯಿ ಇತ್ತು ಅದನ್ನು ಕಡಿಮೆ ಮಾಡಿದಿರಿ. ಮುಂದಿನ ವರ್ಷ ಬೇಕಾದರೆ ನೂರು ಕೋಟಿ ರೂಪಾಯಿ ಮಾಡಬಹುದು. ಅದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಪಾಪ ವೆಂಕಟೇಶ್‌ರವರು ಏನು ಮಾಡುತ್ತಾರೆ ದುಡ್ಡು ಬಂದರೆ ಕೊಡುತ್ತಾರೆ. ಅದಕ್ಕೆ ಮುಖ್ಯಮಂತ್ರಿಗಳು ಹಣ ಕೊಡಬೇಕು. ಮುಖ್ಯಮಂತ್ರಿಗಳು ಹೆಚ್ಚಿಗೆ ಹಣ ಕೊಟ್ಟರೆ ಅನುಕೂಲವಾಗುತ್ತದೆ. ಮಂತ್ರಿಗಳು ಉತ್ತರ ಕೊಡಬಹುದು ಅಷ್ಟೆ. ದುಡ್ಡು ಕೊಡುವವರು ಮುಖ್ಯಮಂತ್ರಿಗಳು.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿ): ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿರುವ ಸಲಹೆ, ಈ ಸಾಲಿನ ಬಜೆಟ್‌ನಲಿ ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಆದರೆ ಕೆಲವು ವಿಷಯಗಳ ಬಗ್ಗೆ ನಾನು ಎಲ್ಲಾ ಪಕ್ಷದ ನಾಯಕರ ಜೊತೆಗೆ ಮಾತನಾಡುತ್ತೇನೆ. ಹೈದರಾಬಾದ್ ಕರ್ನಾಟಕ ಏರಿಯಾ, ಮಲೆನಾಡು ಡೆವಲಪ್‌ಮೆಂಟ್ ಏರಿಯಾ, . ಬಯಲುಸೀಮೆ ಡೆವಲಪ್‌ಮೆಂಟ್ ಏರಿಯಾ, ಬಂಜರುಭೂಮಿ ಡೆವಲಪ್‌ಮೆಂಟ್ ಏರಿಯಾ.. ಈ ತರಹ ಬೇಕಾದರೆ ಸದನದ ಎಲ್ಲಾ ಹಿರಿಯ ಸದಸ್ಯರು ಬೇಕಾದರೆ ಸೇರಲಿ. ಇದು ಏನಾಗುತ್ತದೆ ಎಂದರೆ ಈ ಮಲೆನಾಡು ಏರಿಯಾಗೆ ಕೊಡುವಾಗ ಆ ಫಂಡ್ಸನಲ್ಲೇನೇ ಕೆಲವು ತಾಲ್ಲೂಕುಗಳು they deserve more ಕೆಲವು ತಾಲ್ಲೂಕುಗಳಿಗೆ ಅಷ್ಟು ಕೊಡುವುದು ಬೇಕಾಗುವುದಿಲ್ಲ. ವಾಸ್ತವವಾಗಿ ಆವಾಗ ನಾವು ಏನು ಮಾಡುತ್ತಿದ್ದೇವೆ ಎಂದರೆ ಪತ್ರಿಯೊಬ್ಬ ಶಾಸಕರಿಗೆ ಇಷ್ಟು ಎಂದು ಮಾಡಬೇಕಾಗುತ್ತದೆ. ಅಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ನೀವು ಏನು ಮಾಡಬೇಕು ಎಂದರೆ 50ಲಕ್ಷ ಬೆಲೆಯ ಕೆಲಸವನ್ನು ಸಜೆಸ್ಟ್ ಮಾಡಿ ಎಂದು ಹೇಳುತ್ತೀರಿ. ನಾನು ಏನು ಮಾಡುತ್ತೇನೆ ಎಂದರೆ ಹತ್ತು ಲಕ್ಷ ರೂಪಾಯಿಯ ಒಂದು ಹೈಸ್ಕೂಲ್ ಬಿಲ್ಡಿಂಗ್, ಇನ್ನೊಂದು ಹತ್ತು ಲಕ್ಷ ರೂಪಾಯಿಯ ರಸ್ತೆ ಮತ್ತೊಂದು ಹತ್ತು ಲಕ್ಷ ರೂಪಾಯಿಯ ಕುಡಿಯುವ ನೀರಿಗೆ ಇಷ್ಟೆ ನಾವು ಸಜೆಸ್ಟ್ ಮಾಡುವುದು.

ಶ್ರೀ ಜೆ.ಎಚ್.ಪಟೇಲ್: ದುಡ್ಡು ಅವರಿಗೆ ಕೊಡುತ್ತಾರೆ ಅಂತ ಅಲ್ಲ. ನಿಮ್ಮ ಪ್ರದೇಶದಲ್ಲೇನೇ ಕೆಲಸಗಳನ್ನು ಮಾಡುವಾಗ ಕೆಲವು ತಾಲ್ಲೂಕುಗಳಿಗೆ ಜಾಸ್ತಿ ಮಾಡಬೇಕಾಗುತ್ತದೆ. ಕೆಲವು ತಾಲ್ಲೂಕುಗಳಿಗೆ ಸ್ವಲ್ಪ ಕಡಿಮೆ ಮಾಡಿದರೂ ಅವರು ಸುಧಾರಿಸಿಕೊಳ್ಳುತ್ತಾರೆ. ಅದರ ರ್ಯಾಷನೇಲ್....

SRI MALLIKARJUNA KHARGE: That provision is

also there. ಹೇಗೆ ಎಂದರೆ ಇದು ಎಂ.ಎಲ್.ಎ. ಸೂಚನೆ ಮಾಡತಕ್ಕಂಥಾದ್ದು 50 ಲಕ್ಷ ರೂಪಾಯಿಗಳ ಕೆಲಸವಾದರೂ ಉಳಿದ ಹತ್ತಿಪ್ಪತ್ತು ಕೋಟಿ ರೂಪಾಯಿ ಏನು ಎಕ್ಸಟ್ರಾ ಇರುತ್ತದೆ, ಅವಶ್ಯಕತೆಗೆ ಅನುಸಾರವಾಗಿ ರಾಜ್ಯಹೆದ್ದಾರಿ, ಜಿಲ್ಲಾ ಹೆದ್ದಾರಿ ಅಲ್ಲದೆ ಯಾವ ತಾಲ್ಲೂಕಿನಲ್ಲಿ ಏನು ಅವಶ್ಯಕತೆ ಇದೆ ಅದಕ್ಕೆ ಬೇಕಾದರೆ ಕೊಡುತ್ತಾರೆ. ಅದನ್ನು ಬೋರ್ಡ್‌ನಲ್ಲಿ ತೀರ್ಮಾನ ಮಾಡುತ್ತಾರೆ. ಆದರೆ ಶಾಸಕರು ಮಾಡತಕ್ಕಂಥಾದ್ದು ಅವರವರ ಮತಕ್ಷೇತ್ರದಲ್ಲಿ ಮಾತ್ರ.

ಶ್ರೀ ಜೆ.ಎಚ್.ಪಟೇಲ್: 50 ಲಕ್ಷ ರೂ. ಇದ್ದುದನ್ನು ಈಗ 30 ಲಕ್ಷಕ್ಕೆ ಇಳಿಸಿದ್ದೀರಿ, ಅದು ಸ್ವಲ್ಪ ಹೆಚ್ಚು ಕೊಡಬೇಕು, ನೂರು ಲಕ್ಷ ರೂ ಮಾಡಬೇಕು ಎಂದು ಏನು ಸಲಹೆ ಇದೆ, ಅದನ್ನು ನಾನು ಒಪ್ಪುತ್ತೇನೆ ಆದರೆ ಜನರಲ್ ಆಗಿ ಈ ಎಲ್ಲಾ ಡೆವಲಪ್‌ಮೆಂಟ್ ಬೋರ್ಡ್‌ಗಳು ಏನಿವೆ, ಅದರ ಬಗ್ಗೆಯೂ ಒಂದು ಸಾರಿ ಈ ಸದನ ಚರ್ಚೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಕೆಲವರು ಬಯಲುಸೀಮೆ ಪ್ರದೇಶದವರು ಹೇಳುತ್ತಾರೆ. ಈ ಬಗ್ಗೆ ಚರ್ಚೆ ಮಾಡೋಣ, ಈಗ ಬೇಡ.

(ಗೊಂದಲ)

ಉಪಾಧ್ಯಕ್ಷರು: ಮುಖ್ಯಮಂತ್ರಿಗಳು ಚರ್ಚೆ ಮಾಡೋಣ ಎಂದು ಹೇಳಿದ್ದಾರೆ.

ಶ್ರೀ ವಿ.ಮುನಿಯಪ್ಪ: ಬಯಲುಸೀಮೆಯಲ್ಲಿ ಏನೂ ಆಗಿಲ್ಲ.....

ಉಪಾಧ್ಯಕ್ಷರು: ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ನೀವು ಹೇಳಿದ ಮಾತನ್ನೇ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್: ಮುನಿಯಪ್ಪನವರೇ, ನಿಮ್ಮ ಸೀಮೆ ಬಯಲು ಎಂಬುದು ನನಗೆ ಗೊತ್ತಿದೆ. ಇದು ಸಜೆಸ್ಟ್ ಮಾಡಿದ್ದೇ ತಪ್ಪಾ? ಇದು ಒಂದು ರ್ಯಾಶನೈಲ್ ಆಗಿ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದನ್ನು ವೈಜ್ಞಾನಿಕವಾಗಿ ಮಾಡಬಹುದು. ಅದು ಬಯಲುಸೀಮೆ ಆಗಬಹುದು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಆಗಬಹುದು, ಯಾವುದೇ ಆಗಬಹುದು, ಆಯಾಯ ಕ್ಷೇತ್ರವಾರು ಯಾವ್ಯಾವ ಅಭಿವೃದ್ಧಿ ಆಗಬೇಕು ಎಂದು ಪಟ್ಟಿಯನ್ನು ತಯಾರು ಮಾಡಿದರೆ ಆದ್ಯತೆ ಮೇಲೆ ಕೊಟ್ಟುಕೊಂಡು ಹೋಗಬಹುದು.

SRI J.H.PATIL: That is what I am suggesting. General rationale for developmental works in the State. ಅದು ಬೇಕು. ಅದನ್ನು ಚರ್ಚೆ ಮಾಡೋಣ ಎಂದು ನಾನು ಹೇಳಿದ್ದು. ತಾವು

ಕೊಟ್ಟಿರುವ ಸಲಹೆಯನ್ನು ನಾನು ಒಪ್ಪಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ತಪ್ಪು ತಿಳುವಳಿಕೆ ಬರಬಾರದು. ಇದು ಒಂದು ಕಾಂಪಿಟೆಶನ್ ನಡೆದಿದೆ ಹಾಗೆ ಆಗಬಾರದು. ಅವಶ್ಯಕತೆಗೆ ಅನುಸಾರವಾಗಿ ಒಂದು ಕೋಟಿ ಅಲ್ಲ ನೂರು ಕೋಟಿ ಬೇಕಾದರೂ ಒಂದು ಪ್ರಾಜೆಕ್ಟ್ ತೆಗೆದುಕೊಳ್ಳುತ್ತೀರಿ. ಇರಿಗೇಷನ್ ಪ್ರಾಜೆಕ್ಟ್ ಇರಬಹುದು ಅಥವಾ ಬೇರೆ ಯಾವುದಾದರೂ ಇರಬಹುದು. ಅದಕ್ಕೆ ಯಾರೂ ಕೂಡ ಅಡ್ಡಿ ಬರುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ ಇದು ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂದು ಹೇಳಿ ಒಂದು ಸರ್ವೆ ಮಾಡಿದ್ದು ಇದೆ. ಇದು ಯಾರೂ ಸುಮ್ಮನೆ ಸುಲಭವಾಗಿ ಒಂದು ಅಪ್ಲಿಕೇಷನ್ ಕೊಟ್ಟು ಅದರ ಮೇಲೆ ತೀರ್ಮಾನ ಮಾಡಿದ್ದು ಅಲ್ಲ. ಕಮಿಷನರ್ ಆದ ಬಾಲಸುಬ್ರಹ್ಮಣ್ಯ ಅವರು ಅದರ ಸೆಕ್ರೆಟರಿ ಆಗಿದ್ದರು. ಅವರು ಇಡೀ ದೇಶವನ್ನು ಸುತ್ತಾಡಿ ಹೈದರಾಬಾದ್ ಕರ್ನಾಟಕದಲ್ಲಿ ರೋಡುಗಳು ಎಷ್ಟಿವೆ, ಆಮೇಲೆ ಆರೋಗ್ಯ ಇಲಾಖೆಯಲ್ಲಿ ದವಾಖಾನೆಗಳು ಎಷ್ಟಿವೆ, ಹೈಸ್ಕೂಲ್ಸ್‌ಗಳು ಎಷ್ಟಿವೆ, ಪ್ರೈಮರಿ ಶಾಲೆಗಳು ಎಷ್ಟಿವೆ, ಲಿಟ್ರೆಸಿ ಪರ್ಸೆಂಟೇಜ್ ಏನು, ಪರ್ ಕ್ಯಾಪಿಟಾ ಇನಕಮ್ ಏನು ಇದೆಲ್ಲವನ್ನು ಕೂಡ ತಿಳಿದುಕೊಂಡು ಪ್ರತಿಯೊಂದು ಜಿಲ್ಲೆಯಲ್ಲಿ ಇವತ್ತು ಇನ್‌ಫ್ರಾಸ್ಟ್ರಕ್ಚರ್ ಏನಿದೆ,. ಅದಕ್ಕೆ ಇದಕ್ಕೆ ಹೋಲಿಕೆ ಮಾಡಿದಮೇಲೆ ಇದಕ್ಕೆ ಯಾವರೀತಿಯಾಗಿ ಸಹಾಯ ಮಾಡಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಬಂದಿದ್ದೇ ಹೊರತು ಇದೇನು ಸುಮ್ಮೋಮೊಟ್ಟೋ ಬಂದಂಥಾದ್ದು ಅಲ್ಲ. ಉಳಿದದ್ದು ಇನ್ನೂ ಸರ್ವೆ ಆಗಬೇಕು ಆ ಮಾತು ಬೇರೆ. ಆದರೆ ಈ ಒಂದು ಸರ್ವೆ ಆಗಿ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆಗಿದ್ದರಿಂದ ನೀವು ಅಲ್ಲಿ ಕೊಟ್ಟಿದ್ದೀರಿ, ಇಲ್ಲಿ ಅವರಿಗೆ ಕೊಟ್ಟಿಲ್ಲ ಎಂದು ಅಲ್ಲ. ಈಗ ರಾಜಕೀಯವಾಗಿ ನಾವು ಏನೂ ಹೇಳುವ ಹಾಗಿಲ್ಲ. ಏಕೆಂದರೆ ನಮಗೆ ಏಕೆ ಹೇಳಲಿಲ್ಲ ಎಂದು ಕೇಳುತ್ತಾರೆ. ಆದರೆ ರ್ಯಾಷನಲ್ ಆಗಿ ನೀವು ನೋಡಿದರೆ ಯಾವುದೇ ಒಂದು ಭಾಗ ಯಾವುದೇ ಒಂದು ಜಿಲ್ಲೆಯಲ್ಲಿ ಏನು ಕೊರತೆ ಇದೆ ಅದನ್ನು - based on that only you can release the money, ಎಂದು ಹೇಳುವುದು.

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ನನ್ನದು ಒಂದು ಸಣ್ಣ ಸಲಹೆ. ನನಗೆ ಯೋಚನೆ ಬರುವ ರೀತಿಯಲ್ಲಿ ಈಗೇನು ಈ ಬೋರ್ಡುಗಳನ್ನು ಮಾಡಿದ್ದೀರಿ, ಅದರ ಎಕ್ಸ್‌ಪೆಂಡಿಚರ್‌ಗೆ ನೀವು ಕೊಡುವ ಅಲೋಕೇಶನ್‌ನಲ್ಲಿ ಸಂಬಳ, ಸಾರಿಗೆ ಮತ್ತು ವಾಹನಕ್ಕೆ ಇದಕ್ಕೇ ಹೆಚ್ಚುಪಾಲು ಹೋಗುತ್ತದೆ. ಆದರೆ ಅವರು ಮಾಡುವ ಕೆಲಸ ಏನಿದೆ. ಅವರು ವಾಪಸ್ಸು ನಿಮಗೆ ಕೊಡತಕ್ಕಂಥ ಹಣದಲ್ಲಿ ಪಿಡಬ್ಲ್ಯೂಯವರೇ ಕೆಲಸ ಮಾಡಬೇಕು. ಜೆಡ್.ಪಿ.ಯವರು ಅವರಿಗೆ ಸಂಬಂಧಪಟ್ಟಿದ್ದ ಕೆಲಸ ಮಾಡುತ್ತಾರೆ. ಶಿಕ್ಷಣಕ್ಕೆ ಸಂಬಂಧಪಟ್ಟಿದ್ದು ತಾಲ್ಲೂಕು ಮಟ್ಟದಲ್ಲಿ ಶಿಕ್ಷಣ ಇಲಾಖೆಯವರು ಆ ಕೆಲಸ ಮಾಡುತ್ತಾರೆ. ಅದಕ್ಕೆ ನಾನು ಹಿಂದೆ ಒಂದು ಸಾರಿ ಪ್ರಸ್ತಾಪ ಮಾಡಿದ್ದೆ. ಮತ್ತೆ ಈಗ ನಾನು ಪ್ರಸ್ತಾಪ ಮಾಡುತ್ತೇನೆ. ಈ ಓವರ್‌ಹೆಡ್ ಎಕ್ಸಪೆಂಡಿಚರ್ ಏನಿದೆ ಅದನ್ನು ತಪ್ಪಿಸಿ

ಆ ಹಣ ಕೊಟ್ಟು ಆ ಕ್ಷೇತ್ರದಲ್ಲೇ ಖರ್ಚುಮಾಡುವ ಹಾಗಿದ್ದರೆ ಅಲೋಕೇಷನ್ ಏನಿದೆ, ಆ ಕ್ಷೇತ್ರದಲ್ಲೇ ಒಬ್ಬ ಶಾಸಕರ ಕ್ಷೇತ್ರಕ್ಕೆ ಇಷ್ಟು ಎಂದು ಅಲೋಕೇಷನ್ ಮಾಡಿ ನೀವೇ ಬೇಕಾದರೆ ನಾರ್ಮ್ಸ್ ಫಿಕ್ಸ್ ಮಾಡಿ. ರಸ್ತೆ ಇಷ್ಟು ಆಗಬೇಕೆಂದು ಹೇಳಿ, ಕಟ್ಟಡ, ಶಾಲೆಗೆ, ಕುಡಿಯುವ ನೀರಿಗೆ ಇಷ್ಟು ಆಗಬೇಕು ಎಂದು ಹೇಳಿ ನಾರ್ಮ್ಸ್ ಫಿಕ್ಸ್ ಮಾಡಿ. ಹೀಗೆ ಮಾಡಿ ಆ ತಾಲ್ಲೂಕಿಗೆ ಕೊಡುವುದಾದರೆ ಈ ಓವರ್‌ಹೆಡ್ ಎಕ್ಸಪೆಂಡಿಚರ್ ಏನಿದೆ ಅದನ್ನು ಸಾಕಷ್ಟು ಕಡಿಮೆ ಮಾಡಿ ಅದು ಈ ಅಭಿವೃದ್ಧಿ ಕೆಲಸಕ್ಕೆ ಬರುತ್ತದೆ. ಇದರ ಬಗ್ಗೆ ಚಿಂತನೆ ಮಾಡಬಹುದಲ್ಲಾ?

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ - 'ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುದು'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5ರವರೆಗೆ

ಉಪಾಧ್ಯಕ್ಷರು: ಖಂಡ 2ರಿಂದ 5ರವರೆಗೆ, ಎರಡೂಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 5ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ - 'ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡ ರಾಜ್ಯ ಮಂತ್ರಿ): ಮಾನ್ಯ ಉಪಾಧ್ಯಕ್ಷರೇ, ''ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಹೈದರಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ 'ವಿಧಾನ ಪರಿಷತ್ತಿನಿಂದ ಅಂಗಿಕೃತವಾದ ರೂಪದಲ್ಲಿರುವ 1998ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5. ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕ, 1988

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಯವಂತ ಪ್ರೇಮಾನಂದ ಸುಬ್ಬರಾಯ (ಅಬ್ಕಾರಿ ರಾಜ್ಯಮಂತ್ರಿ): ಮಾನ್ಯ ಅಧ್ಯಕ್ಷರೇ, ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಜಯವಂತ ಪ್ರೇಮಾನಂದ ಸುಬ್ಬರಾಯ (ಅಬ್ಕಾರಿ ರಾಜ್ಯಮಂತ್ರಿ): ಸನ್ಮಾನ್ಯ ಉಪಾಧ್ಯಕ್ಷರೇ, ಈ ಒಂದು ತಿದ್ದುಪಡಿಯ ಉದ್ದೇಶ ಈ ಹಿಂದೆ ಅಪರಾಧಕ್ಕೆ ಗರಿಷ್ಠ ನಾವು ದಂಡವನ್ನು ಐದು ಸಾವಿರ ವರೆಗೆ ವಸೂಲು ಮಾಡುತ್ತಿದ್ದೆವು. ಈ ಒಂದು ತಿದ್ದುಪಡಿಯ ಮೂಲಕ ಇನ್ನುಮುಂದೆ 25 ಸಾವಿರ ವರೆಗೆ ದಂಡವನ್ನು ವಿಧಿಸಬೇಕೆಂದು ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಇದರ ಉದ್ದೇಶ ಬಹುತೇಕವಾಗಿ ಸಾರ್ವಜನಿಕರಿಂದ ಕೆಲವು ಆಕ್ಷೇಪಣೆಗಳು ಬರುತ್ತಿದ್ದವು. ಬಾರ್‌ಗಳು ರಾತ್ರಿ 11 ಗಂಟೆ ನಂತರ ನಡೆಯುತ್ತವೆ, ಮಧ್ಯದ ಅಂಗಡಿಗಳು ರಾತ್ರಿ 9ಗಂಟೆ ನಂತರವೂ ನಡೆಯುತ್ತವೆ, ಕೆಲವು ಸಾರಾಯಿ ಅಂಗಡಿಗಳಲ್ಲಿ ಸೆಕೆಂಡ್ಸ್ ಸಿಗುತ್ತದೆ, ಕೆಲವೊಂದು ನಿಯಮಬಾಹಿರವಾಗಿ ಅವರು ತಮ್ಮ ವ್ಯವಹಾರಗಳನ್ನು ಮಾಡುತ್ತಾರೆ. ಇದು ಸಾರ್ವಜನಿಕವಾಗಿ ಕೇಳಿಬರುವಂಥ ಹಲವಾರು ಆಪಾದನೆಗಳು. ಈ ಆಪಾದನೆಗಳನ್ನು ಸ್ವಲ್ಪ ಕಡಿವಾಣ ಮಾಡುವ ಸಲುವಾಗಿ ಮತ್ತು ಅಪರಾಧಗಳನ್ನು ಕಡಿಮೆ ಮಾಡುವ ಸಲುವಾಗಿ ಇಷ್ಟೇ ಅಲ್ಲದೆ ಶಿಕ್ಷೆಯನ್ನು ಸಹ ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡಿದಾಗ ಇಂತಹ ಸಮಸ್ಯೆಗಳು ನಮ್ಮ ರಾಜ್ಯದಲ್ಲಿ ಕಡಿಮೆ ಆಗುವ ಒಂದು ಘನೋದ್ದೇಶದಿಂದ